ಪಶ್ಚಿಮ ಮತ್ತು ಪೂರ್ವ ಎರಡೂ ಕಡೆನೂ ವಾಮಾಚಾರ ಬಹುತೇಕ ನಕಾರಾತ್ಮಕ ಅರ್ಥವನ್ನು ಪಡೆದಿದೆ. ಪಾಶ್ಚಿಮಾತ್ಯ ಸನ್ನಿವೇಶದಲ್ಲಿ ಪಾಶವೀಕರಣ ಮತ್ತು ಬಲಿಕೊಡುವ ಪ್ರಕ್ರಿಯೆಯೊಂದಿಗೆ ಅದಕ್ಕಿರುವ ಕರುಳು ಬಳ್ಳಿಯ ಸಂಬಂಧದಿಂದಾಗಿ ಈ ನಕಾರಾತ್ಮಕತೆ ಹುಟ್ಟಿದೆ.

**ಯೊಹಾನಾ ಕರ್ವಹಾಲ್**
**ಸಂದರ್ಶನ**

◆ **ನಿಮ್ಮ ಕೌಟುಂಬಿಕ ಹಿನ್ನೆಲೆ, ಬಾಲ್ಯದ ಪರಿಸರ ಮತ್ತು ಶೈಕ್ಷಣಿಕ ಜೀವನದ ಬಗ್ಗೆ ಹಂಚಿಕೊಳ್ಳಿ.**

ಸ್ವಲ್ಪ ಗೊಂದಲದ ಬಾಲ್ಯ ನನ್ನದು. ಬಾಲ್ಯದ ದಿನಗಳಲ್ಲಿ ಬಹಳ ಕಷ್ಟದ ಸನ್ನಿವೇಶಕ್ಕೆ ನಾನು ಸಿಲುಕಿಕೊಂಡಿದ್ದೆ. ಮತ್ತೆ ನಂಗನ್ಸುತ್ತೆ ಆ ಸನ್ನಿವೇಶ ಸೃಷ್ಟಿಸಿದ 'ಟ್ರಾಮಾ'ದಿಂದ ಬಾಲ್ಯದ ಸಾಕಷ್ಟು ನೆನಪುಗಳು ಮಾಸಿ ಹೋಗಿವೆ. ನನಗೆ ಸ್ಪಷ್ಟವಾಗಿ ನೆನಪಿರೋದು ನನ್ನ ಪೋಷಕರು, ಓದುವ ನನ್ನ ಹವ್ಯಾಸಕ್ಕೆ ಅದರಲ್ಲೂ ಕಥೆ, ಕವಿತೆ, ಕಾದಂಬರಿಗಳನ್ನು ಓದಲು ಸದಾ ಪ್ರೋತ್ಸಾಹಿಸುತ್ತಿದ್ದದ್ದು. ನನ್ನಮ್ಮ ಸ್ಪ್ಯಾನಿಷ್ ಭಾಷೆ ಮತ್ತು Early childhood educationನಲ್ಲಿ ಪದವಿ ಪಡೆದಿದ್ದರಿಂದ ಸಾಹಿತ್ಯದ ಪುಸ್ತಕಗಳನ್ನು ಓದುವ ವಿಚಾರದಲ್ಲಿ ಸಂಪೂರ್ಣ ಪ್ರೀತಿ ಬೆಳೆಸಿಕೊಳ್ಳಲು ಸಾಧ್ಯವಾಯಿತು. ನನ್ನ ಶಾಲಾ ದಿನಗಳ, ಸಂತೋಷದ ಮತ್ತು ಸುಂದರ ನೆನಪುಗಳನ್ನು ನಾನು ಕಾಯ್ದುಕೊಂಡಿದ್ದೇನೆ. ಬದುಕಿನ ಮಹತ್ವದ ಘಳಿಗೆಗಳಲ್ಲಿ ನಾನು ಒಂಟಿಯಾಗಿದ್ದರೂ ಕೂಡ, ಶಾಲಾ ಜೀವನದಲ್ಲಿ ನಾನು ಸಾಕಷ್ಟು ಮಹತ್ವದ ವ್ಯಕ್ತಿಗಳನ್ನು ಭೇಟಿ ಮಾಡಿದ್ದೇನೆ ಮತ್ತವರೆಲ್ಲರೂ ಇವತ್ತಿಗೂ ನನಗೆ ಒಳ್ಳೆಯ ಸ್ನೇಹಿತರು. ಸಾಹಿತ್ಯಿಕ ಓದು, ನಾನು ಮಾಡುವ ಇನ್ನಿತರ ಕೆಲಸ ಕಾರ್ಯಗಳಲ್ಲೂ ಪ್ರೀತಿ ಬೆಳೆಯುವಂತೆ ಮಾಡಿತು ಎನ್ನಬಹುದು.

◆ **ನಿಮ್ಮ ಜಾಗತಿಕ ದೇವಿ ಕವಿತೆಗಳ ಸರಣಿ... ಅದರ ಬಗ್ಗೆ ಸ್ವಲ್ಪ ಹೇಳಬಹುದಾ? ಎಲ್ಲಿಂದ ಈ ಆಸಕ್ತಿ ಶುರುವಾಯ್ತು?**

ವಿವಿಧ ಧರ್ಮಗಳ ಪುರಾಣ ಕಥೆಗಳು ಹೇಳುವ, ಮಾನುಷ-ಅಮಾನುಷ ಇತಿಹಾಸದ ಬಗ್ಗೆ ಬಹಳ ಆಸಕ್ತಿ ನನಗೆ. ಅದಕ್ಕಾಗೇ ನಾನು ಅಧ್ಯಯನಕ್ಕಾಗಿ ಸ್ತ್ರೀ ದೇವತೆಗಳನ್ನು ಆರಿಸಿಕೊಂಡೆ. ಶಕ್ತಿ ದೇವತೆಗಳ ಸುತ್ತ ಮುತ್ತ ಇರುವ ಜಗತ್ ಸೃಷ್ಟಿ ಪುರಾಣದ (Cosmogony) ವಿಶ್ವಾತ್ಮಕ ನಿರೂಪಣೆಗಳನ್ನು ತಿಳಿದುಕೊಳ್ಳುವ ತೀರದ ಕುತೂಹಲದಿಂದ, ಪ್ರಪಂಚದಾದ್ಯಂತ ಇರುವ ದೇವತೆಯರ ಬಗ್ಗೆ ಪುಸ್ತಕವೊಂದನ್ನು ಬರೆಯುವ ಬಯಕೆ ಹುಟ್ಟಿಕೊಂಡಿತು. ಈ ಹುಡುಕಾಟದಲ್ಲಿ ನಂಬಲಸಾಧ್ಯವಾದ, ಇನ್ನು ಒಂದು ಪದ್ಯಗಳ ಸಂಪುಟ ಹೊರತರಬಲ್ಲಷ್ಟು ವಸ್ತು ವಿಷಯಗಳು ನನ್ನ ಗ್ರಹಿಕೆಗೆ ಸಿಕ್ಕವು. ನಮ್ಮ ಪ್ರಾಚೀನ ಪುರಾಣಗಳಿಗೆ ನಿಜಕ್ಕೂ ಕೃತಜ್ಞತೆ ಸಲ್ಲಿಸಬೇಕು. ಇವು ಸಾಂಸ್ಕೃತಿಕ ಮತ್ತು ಭಾಷಿಕ ವ್ಯತ್ಯಾಸಗಳ ಹೊರತಾಗಿಯೂ ನಮ್ಮೆಲ್ಲರನ್ನೂ ಮಾನವೀಯ ವರ್ತುಲದಲ್ಲಿ ಬಂಧಿಸುತ್ತವೆ. ಈ ನಿಟ್ಟಿನಲ್ಲಿ ಪ್ರಾಚೀನ ಗ್ರೀಕ್‌ನಂತೆ, ಪುರಾತನ ಭಾರತದ ಹೆಣ್ಣು ದೇವತೆಗಳ ಕಥನಗಳು ಕುತೂಹಲಕಾರಿಯಾಗಿವೆ. ಅವನ್ನು ಶೋಧಿಸುವ ಕಾರ್ಯ ಇನ್ನು ಮುಂದಾದರೂ ಗಂಭೀರವಾಗಿ ನಡೆಯಬೇಕು.

◆ **'ದೇವಿ ಕಾವ್ಯ ಸಂಪುಟ' ಕನ್ನಡಕ್ಕೂ ಅನುವಾದವಾಯ್ತು. ಇದರ ಕುರಿತು ನಿಮ್ಮ ಅನುಭವವೇನು?**

ನನ್ನ ಪದ್ಯಗಳು ಯಾರಿಗೂ ಹಿಡಿಸೋದಿಲ್ಲ ಅಂತ ನಾನಂದುಕೊಂಡಿದ್ದೆ. ಇದು ತಪ್ಪು ಅಂತ ನಂಗೆ ಗೊತ್ತಾಯ್ತು. ಎಚ್.ಎಸ್.ಶಿವಪ್ರಕಾಶ್ ಅವರಂತಹ ಅದ್ಭುತ ಮಾರ್ಗದರ್ಶಕರನ್ನು ಭೇಟಿ ಮಾಡಿದ್ದು ನನ್ನ ಅದೃಷ್ಟ ಅಂತಲೇ ಹೇಳಬಹುದು. ಅವರು